**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**ಸಿಸಿ.ನಂ. 175/2025**

| | | | |
|---|---|---|---|
| **ಸಾಕ್ಷಿದಾರರು** | : | **ರಾಮಕೃಷ್ಣ** | **ಸಿ.ಡಬ್ಲ್ಯೂ.: 3** |
| **ತಂದೆ /ಗಂಡನ ಹೆಸರು** | : | **ಜವರೇಗೌಡ** | **ಪಿ.ಡಬ್ಲ್ಯೂ : 3** |
| **ವಯಸ್ಸು** | : | **41 ವರ್ಷ** | |
| **ವೃತ್ತಿ** | : | **ವ್ಯವಸಾಯ** | |
| **ವಾಸ ಸ್ಥಳ** | : | **ಬನ್ನಂಗಾಡಿ** | |

**ಸಾಕ್ಷಿಯನ್ನು ದಿಃ 27.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ದಿಃ 11.12.2024 ರಂದು ಮಧ್ಯಾಹ್ನ ಚಾಸಾ.1 ರವರು ನನಗೆ ಕರೆ ಮಾಡಿ, ದೇವರಾಜು ಎಂಬುವವರು ಚಾಸಾ.1 ರವರಿಗೆ ಕರೆ ಮಾಡಿದರು ಎಂದು ತಿಳಿಸಿದರು. ನಾನು ಮತ್ತು ಚಾಸಾ.2 ಜಮೀನಿನ ಬಳಿಗೆ ಹೋದೆವು. ಆರೋಪಿಗಳು ಮತ್ತು ಇತರರು ಇದ್ದರು. ಚಾಸಾ.1 ರವರ ಮೇಲೆ ಆರೋಪಿಗಳೆಲ್ಲರೂ ಜಗಳ ಮಾಡುತ್ತಿದ್ದರು. ನಾನು ಜಗಳ ಬಿಡಿಸಲು ಹೋದಾಗ ಎಲ್ಲಾ ಆರೋಪಿಗಳು ದೊಣ್ಣೆ ಮತ್ತು ಪೈಪ್ ನಿಂದ ಹೊಡೆದರು. ಬೆನ್ನಿನ ಹಿಂಭಾಗ ಊತದ ಗಾಯಗಳಾಗಿದ್ದವು, ಕಿವಿಯ ಬಳಿ ಊತದ ಗಾಯ ಆಗಿತ್ತು, ನಾನು ಎಳಲಾಗದೇ ಬಿದ್ದು ಹೋದೆನು. ಮು.ಮ ಗಳನ್ನು ಹಾಗೂ ಆರೋಪಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಾನು ಕೆಳಕ್ಕೆ ಬಿದ್ದು ಹೋದ ನಂತರ

*ಏನಾಯಿತು ಎಂದು ನನಗೆ ಗೊತ್ತಾಗಲಿಲ್ಲ. ಚಾಸಾ.1 ಮತ್ತು ಬೇರೆ ಅಕ್ಕ ಪಕ್ಕದವರು ಪಾಂಡವಪು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಆಸ್ಪತ್ರೆಯಲ್ಲಿ ಘಟನೆಯ ವಿಚಾರ ಹೇಳಿರುತ್ತೇನೆ. ಪೊಲೀಸರ ಮುಂದೆ ಯಾವುದೇ ವಿಚಾರ ಹೇಳಿಲ್ಲ.*

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಎಪಿಪಿ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)***

***ಪಾಟೀ ಸವಾಲುಃ ಎಪಿಪಿ ರವರಿಂದಃ***

*ದಿಃ 11.12.2024 ರಂದು 2 ನೇ ಆರೋಪಿ ಮರ ಕಡಿಯುತ್ತಿದ್ದಾರೆಂದು ಅರಣ್ಯ ಇಲಾಖೆಗೆ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಚಾಸಾ.1 ರವರು 2 ನೇ ಆರೋಪಿಗೆ ಏಕೆ ದೂರು ಕೊಟ್ಟಿರುತ್ತೀರ ಎಂದು ಕೇಳಿದಾಗ, ಮೋಹನ್ ಹೋಗಿ 1 ನೇ ಆರೋಪಿಯನ್ನು ಸ್ಥಳಕ್ಕೆ ಕರೆದುಕೊಂಡು ಬಂದರು ಎಂದರೆ ಸರಿ. 1 ನೇ ಆರೋಪಿ ಜಮೀನಿನ ಬಳಿ ಬಂದಾಗ, ಚಾಸಾ.1 ರವರು ನಿಮ್ಮ ಅಪ್ಪ ಯಾವುದೇ ಅಕ್ರಮ ಮಾಡಿಲ್ಲವಾ ಎಂದು ಕೇಳಿದರು ಎಂದರೆ ಸರಿ. ಆಗ ಚಾಸಾ.1 ರವರ ಕತ್ತಿನ ಪಟ್ಟಿಯನ್ನು 1 ನೇ ಆರೋಪಿ ಹಿಡಿದು ಶರ್ಟ್ ಗುಂಡಿಯನ್ನು ಕಿತ್ತು ಹಾಕಿದರು ಎಂದರೆ ಸರಿ. ನಂತರ ನೀವು ಜಗಳವನ್ನು ಬಿಡಿಸಿ ಕಳುಹಿಸಿರುತ್ತೀರ ಎಂದರೆ ಸರಿ. ಚಾಸಾ.1 ರವರು ಊರಿಗೆ ಹೋದ ನಂತರ 3 ನೇ ಆರೋಪಿ ಚಾಸಾ.1 ರವರಿಗೆ ಹೊಲದ ಹತ್ತಿರ ಬಾ,*

*ಮಾತನಾಡೋಣ ಎಂದು ಕರೆದರು ಎಂದರೆ ಸರಿ. ಮಧ್ಯಾಹ್ನ 1.30 ಗಂಟೆಗೆ ಚಾಸಾ.1 ಹಾಗೂ 1 ರಿಂದ 3 ನೇ ಆರೋಪಿಗಳು ಜಮೀನಿನ ಬಳಿ ಹೋದಾಗ, ಎಲ್ಲಾ ಆರೋಪಿಗಳು ಚಾಸಾ.1 ರವರ ಮೇಲೆ ಗಲಾಟೆ ತೆಗೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ.1 ರವರ ಹೆಂಡತಿ, ಚಾಸಾ.4 ರವರು ಜಗಳ ಬಿಡಿಸಲು ಹೋದಾಗ 3 ನೇ ಆರೋಪಿ ಚಾಸಾ.4 ರವರ ಎಡಗೈ ಗೆ ದೊಣ್ಣೆಯಿಂದ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ದಿಃ 14.12.2024 ರಂದು ಪೊಲೀಸರು ಮುಂದೆ ಈ ಮೇಲಿನಂತೆ ಹೇಳಿಕೆ ಕೊಟ್ಟಿರುತ್ತೀರ ಎಂದರೆ ಸರಿ.*

***ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ***

*ನಾನು ಹೇಳಿದ ಹೇಳಿಕೆಯನ್ನು ಪೊಲೀಸರು ನನ್ನ ಸಮಕ್ಷಮ ಬರೆದುಕೊಂಡರು. ಪೊಲೀಸರು ಬರೆದುಕೊಂಡ ಹೇಳಿಕೆಯನ್ನು ನನಗೆ ಓದಿ ತಿಳಿಸಿದರೋ, ಇಲ್ಲವೋ ಜ್ಞಾಪಕ ಇಲ್ಲ. ಚಾಸಾ.1, 2, 4 ರಿಂದ 8 ನಿಮ್ಮ ಸಂಬಂಧಿಕರು ಎಂದರೆ ಸರಿ. ಗೋಮಾಳದ ಅಕ್ಕ ಪಕ್ಕ ನನ್ನ ಜಮೀನಿದೆ. ನನ್ನ ಜಮೀನಿನ ದಾಖಲೆಯನ್ನು ಪೋಲೀಸರಿಗೆ ನೀಡಿಲ್ಲ. ಗೋಮಾಳದ ಅಕ್ಕ ಪಕ್ಕ ನನ್ನ ಜಮೀನಿಲ್ಲ ಎಂದರೆ ಸರಿಯಲ್ಲ. ಗೋಮಾಳದ ಅಕ್ಕ ಪಕ್ಕ ನನ್ನ ಜಮೀನು ಇಲ್ಲ, ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಅನುಭೋಗದಲ್ಲಿದ್ದೇನೆ ಎಂದು ಹೇಳುತ್ತಾರೆ. 1 ಮತ್ತು 2 ನೇ ಆರೋಪಿಯ ತಂದೆ ಹಾಗೂ 3 ನೇ ಆರೋಪಿಯ ಮಾವ ಸರ್ವೆ ನಂ. 117 ಕ್ಕೆ ಬನ್ನಂಗಾಡಿ ಗ್ರಾಮ ಹಾಗೂ ಸರ್ವೆ ನಂ. 67, ಬಿಂಡಹಳ್ಳಿ ಗ್ರಾಮ, ಅನುಭೋಗದ ಪ್ರಕಾರ ಮಂಜೂರು*

ಮಾಡಬೇಕಾಗಿ, ಅರ್ಜಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ಕೊಡುತ್ತಿದ್ದೀರ ಎಂದರೆ ಸರಿಯಲ್ಲ. ನೀವು ಜಮೀನಿನ ಸ್ವಾದೀನ ಇರುವ ಬಗ್ಗೆ ಮಂಜೂರಾತಿ ಮಾಡಿಕೊಡಿ ಎಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿರುತ್ತೀರ ಎಂದರೆ, ಸಾಕ್ಷಿ ನನ್ನ ತಂದೆಯನ್ನು ಕೇಳಬೇಕು ಎಂದು ಹೇಳುತ್ತಾರೆ. ನೀವು ಯಾವತ್ತು ಜಮೀನಿನ ಅನುಭೋಗದಲ್ಲಿ ಇಲ್ಲ ಎಂದರೆ ಸರಿಯಲ್ಲ. ನೀವೇ ಸ್ವತಃ ಆ ಭೂಮಿಯ ಸಂಬಂಧ ಆರೋಪಿಗಳಿಗೆ ಪದೇ ಪದೇ ತೊಂದರೆ ಕೊಡುತ್ತೀರ ಎಂದರೆ ಸರಿಯಲ್ಲ. 1 ನೇ ಆರೋಪಿ ಮೇಲೆ ನೀವು, ಚಾಸಾ.1, ಚಾಸಾ.2, 4 ಹಲ್ಲೆ ಮಾಡಿರುವ ಬಗ್ಗೆ ಕೆ.ಆರ್.ಎಸ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದರೆ, ಸಾಕ್ಷಿ ನಾವು ಹಲ್ಲೆ ಮಾಡಿಲ್ಲ, ಪ್ರಕರಣ ದಾಖಲಾಗಿದೆ ಎಂದು ಹೇಳುತ್ತಾರೆ. ಮನೋಹರ್ ರವರು ಮರ ಕಡಿದಿರುವ ಬಗ್ಗೆ ದೂರು ಕೊಟ್ಟಿದ್ದರೂ ಎಂದರೆ ಸರಿ. ಕೃತ್ಯ ನಡೆಯಿತ್ತು ಎನ್ನುವ ಸ್ಥಳ ಮತ್ತು ನನ್ನ ಜಮೀನು ಅಕ್ಕ ಪಕ್ಕದಲ್ಲೇ ಕಾಣುವಂತಿದೆ. ಚಾಸಾ.2 ಹೋದರು ಎಂದು ನಾನು ಮತ್ತು ನನ್ನ ಅಣ್ಣ ನಡೆದುಕೊಂಡು ಹೋದೆವು. ಚಾಸಾ.1 ನನಗೇನೂ ಕರೆದಿಲ್ಲ. ಈಗ ಹೇಳಿರುವ ವಿಚಾರ ಪೊಲೀಸರ ಮುಂದೆ ಹೇಳಿಲ್ಲ. ನಿಮಗೂ ಮನೋಹರ್ ರವರಿಗೂ ಕರಾರು ಪತ್ರದ ವ್ಯಾಜ್ಯ ಇದೆ ಎಂದರೆ ಸರಿಯಲ್ಲ. ದಿಃ 11.12.2004 ರಂದು ಮಧ್ಯಾಹ್ನ ಸುಮಾರು 12.30 ಗಂಟೆಗೆ ಗಲಾಟೆ ಆಯಿತು. ನಮ್ಮ ಕುಟುಂಬದವರನ್ನು ಹೊರತುಪಡಿಸಿ, ಬೇರೆಯವರು ಯಾರಾದರೂ ಇದ್ದರಾ ಎಂದರೆ, ನಾನು ಕೆಳಗೆ ಬಿದ್ದು ಹೋದ್ದರಿಂದ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಸಾ.4 ರವರಿಗೆ 3 ನೇ ಆರೋಪಿ ಹೊಡೆದರು. ಎರಡು ಬಾರಿ ಗಲಾಟೆ ಆಯಿತು. ಮೊದಲ ಬಾರಿ ಗಲಾಟೆ ಆದಾಗ ನಾನು ಹೋಗಿರಲಿಲ್ಲ, ಎರಡನೇ ಬಾರಿ ಗಲಾಟೆ ಆಗಿದ್ದಾಗ ನಾನು ಹೋಗಿದ್ದೆನು. ನಾನು

*ಪೊಲೀಸರಿಗೆ ಎರಡು ಬಾರಿ ಗಲಾಟೆ ಆದ ವಿಚಾರ ಹೇಳಿಲ್ಲ. ನನಗೆ ರಕ್ತ ಬರುವಂತಹ ಗಾಯ ಆಗಿರಲಿಲ್ಲ, ಊತದ ಗಾಯಗಳಾಗಿದ್ದವು. ಪ್ರಜ್ಞೆ ತಪ್ಪಿ ಬಿದ್ದು ಹೋದ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಶರ್ಟ್ ಚಾಸಾ. 1 ರವರ ಶರ್ಟ್. ನಿಮ್ಮ ಶರ್ಟ್ ಗುಂಡಿ ಕಿತ್ತು ಹೋದ ಬಗ್ಗೆ ಪೊಲೀಸರಿಗೆ ಹೇಳಿರುತ್ತೀರ ಎಂದರೆ, ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಒಟ್ಟು 6 ಜನ ಬಂದು ಹೊಡೆದರು. ಈಗ ಹೇಳಿದ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ಮು.ಮಾ ಗಳ ಮೇಲೆ ನಾನು ವಿಶೇಷ ಗುರುತು ಇಟ್ಟುಕೊಂಡಿಲ್ಲ. ಮು.ಮಾ ಗಳನ್ನು ಸೃಷ್ಟಿಸಿ ಪೋಲೀಸರಿಗೆ ಕೊಟ್ಟಿದೆ ಎಂದರೆ ಸರಿಯಲ್ಲ. ನಿಮ್ಮ ಕುಟುಂಬದವರನ್ನು ಬಿಟ್ಟು ಬೇರೆ ಸಾಕ್ಷಿದಾರರ ಹೇಳಿಕೆಯನ್ನು ಪೊಲೀಸರು ಪಡೆದುಕೊಂಡರೋ, ಇಲ್ಲವೋ ನನಗೆ ಗೊತ್ತಿಲ್ಲ. ಮನೋಹರ್ ಕೊಟ್ಟಿರುವ ದೂರಿನಿಂದ ತಪ್ಪಿಸಿಕೊಳ್ಳಲು ಸುಳ್ಳು ದೂರನ್ನು ಆರೋಪಿಗಳ ಮೇಲೆ ಕೊಟ್ಟಿದೆ ಎಂದರೆ ಸರಿಯಲ್ಲ. ಆರೋಪಿಗಳು ಅನುಭವದಲ್ಲಿರುವ ಜಮೀನನ್ನು ತಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***